■ ಹನಿ

# ಚಿತ್ರದ ವ್ಯಂಗ್ಯ!

ಅಸೀಮ್ ತ್ರಿವೇದಿ ಎಂಬ ತರುಣ ವ್ಯಂಗ್ಯಚಿತ್ರಕಾರ ಹಿಂದಿ ದಿನಪತ್ರಿಕೆಗಳಲ್ಲಿ ವ್ಯಂಗ್ಯ ಚಿತ್ರಗಳನ್ನು ಬಿಡಿಸಿದ್ದನ್ನು ಆಗ ಎಷ್ಟು ಮಂದಿ ನೋಡಿದ್ದಾರೋ ಗೊತ್ತಿಲ್ಲ, ಈಗಂತೂ ಪೊಲೀಸರ ಮತ್ತು ಸರಕಾರದ ಕೃಪೆಯಿಂದ ಈತನ ವ್ಯಂಗ್ಯಚಿತ್ರ-ಗಳನ್ನು ಲಕ್ಷಾಂತರ ಮಂದಿ ವೀಕ್ಷಿಸುತ್ತಿದ್ದಾರೆ. ಪೊಲೀಸರ ಮೂರ್ಖತನದ ಕ್ರಮ, ಈತನಿಗೆ ಜಗತ್ತಿನ ಎಲ್ಲೆಡೆಗಳಿಂದ ಬೆಂಬಲದ ಮಹಾಪೂರ ಹರಿದು-ಬರಲು ಕಾರಣವಾಗಿದೆ. ಐಪಿಸಿ ಸೆಕ್ಷನ್ 124ರ ಪ್ರಕಾರ ಈತನ ವಿರುದ್ಧ ದೇಶದ್ರೋಹದ ಆಪಾದನೆಯನ್ನು ಹೊರಿಸಿ ಬಂಧಿಸಿರುವ ಪೊಲೀಸರು ಮುಂಬೈ ಹೈಕೋರ್ಟ್ ನ್ಯಾಯಪೀಠದಿಂದಲೂ ತೀವ್ರ ಟೀಕೆ ಎದುರಿಸಿದ್ದಾರೆ. ಅಸೀಮ್ ತ್ರಿವೇದಿ ಸಂಸತ್ತನ್ನು ಕಮೋಡ್‌ನಂತೆಯೂ, ಅಶೋಕಸ್ತಂಭದ ನಾಲ್ಕು ಸಿಂಹಗಳನ್ನು ತೋಳಗಳಂತೆಯೂ ಚಿತ್ರಿಸಿ ವ್ಯಂಗ್ಯಚಿತ್ರ ಬರೆದದ್ದು 'ರಾಷ್ಟ್ರದ್ರೋಹ'ದ ಅಡಿಯಲ್ಲಿ ಬರುತ್ತದೆಯೆ ಎನ್ನುವುದೀಗ ಚರ್ಚೆಯ ವಿಷಯವಾಗಿದೆ. ಕಾನ್ಪುರದಲ್ಲಿ ಹುಟ್ಟಿ ಮುಂಬೈಯಲ್ಲಿ ವ್ಯಂಗ್ಯಚಿತ್ರಕಾರನಾಗಿದ್ದ ಅಸೀಮ್ ತ್ರಿವೇದಿಗೆ ಮುಂಬೈ ಹೈಕೋರ್ಟ್ ಈಗಾಗಲೇ ಜಾಮೀನು ನೀಡಿ ಬಿಡುಗಡೆ ಮಾಡಿದ್ದು, ಸರ್ಕಾರದಿಂದ ವಿವರಣೆ ಕೇಳಿ ನೋಟಿಸ್ ನೀಡಿದೆ. 'ಇವತ್ತು ವ್ಯಂಗ್ಯಚಿತ್ರಕಾರನನ್ನು ಬಂಧಿಸುತ್ತೀರಿ. ನಾಳೆ ಇದೇ ಆರೋಪದ ಮೇಲೆ ಸಿನಿಮಾ ನಿರ್ದೇಶಕರನ್ನೂ, ನಾಟಕಕಾರರರನ್ನೂ ಬಂಧಿಸುತ್ತೀರಿ' ಎಂದು ಹರಿ ಹಾಯ್ದಿರುವ ಮುಂಬೈ ಹೈಕೋರ್ಟಿನ ನ್ಯಾಯಪೀಠವು, ಕಾರ್ಟೂನ್ ಬಿಡಿಸಿರುವುದು ದೇಶದ್ರೋಹ ಹೇಗಾಗುತ್ತದೆ ಎಂಬ ಬಗ್ಗೆ ವಿವರಣೆ ಬಯಸಿದೆ. 'ಈ ಬಗ್ಗೆ ಚರ್ಚಿಸಲು ಪೊಲೀಸ್ ಇಲಾಖೆ ಮತ್ತು ಗೃಹ ಇಲಾಖೆಯ ಅಧಿಕಾರಿಗಳ ಸಭೆ ಕರೆಯಲಾಗಿದೆ' ಎಂದು ಸರ್ಕಾರದ ಪರ ವಕೀಲರು ಹೇಳಿದ್ದಕ್ಕೆ, 'ಅದನ್ನು ಬಂಧಿಸುವ ಮೊದಲೇ ಮಾಡಬೇಕಿತ್ತಲ್ಲ?' ಎಂದು ನ್ಯಾಯಪೀಠ ಪ್ರಶ್ನಿಸಿದೆ. ಅಸೀಮ್ ತ್ರಿವೇದಿಯ ಪರವಾಗಿ ಸಾರ್ವಜನಿಕ ಹೇಳಿಕೆ ನೀಡಿ ಬೆಂಬಲ ಸೂಚಿಸಿದವರಲ್ಲಿ ಭಾರತೀಯ ಪ್ರೆಸ್ ಕೌನ್ಸಿಲ್‌ನ ಅಧ್ಯಕ್ಷ ನ್ಯಾ. ಮಾರ್ಕಂಡೇಯ ಕಟ್ಜು ಮತ್ತು ಭ್ರಷ್ಟಾಚಾರ ವಿರೋಧಿ ಹೋರಾಟದ ಮುಂಚೂಣಿಯಲ್ಲಿರುವ ಅರವಿಂದ ಕೇಜ್ರಿವಾಲ್ ಕೂಡಾ ಸೇರಿದ್ದಾರೆ.



ಇನ್ನೂ 25ರ ಹರೆಯದ ಅಸೀಮ್ ತ್ರಿವೇದಿ, ಕಳೆದ ವರ್ಷ ಅಣ್ಣಾ ಹಜಾರೆಯವರ ಭ್ರಷ್ಟಾಚಾರ ವಿರೋಧಿ ದೇಶವ್ಯಾಪಿ ಆಂದೋಲನದಲ್ಲಿ ಭಾಗವಹಿಸಿದ್ದ. ಸರಕಾರ ಆ ಕಾರಣದಿಂದಲೇ ಈತನನ್ನು ಬಂಧಿಸಿ ಕಂಗೆಡಿಸಲು ಹೊರಟಂತಿದೆ. ಈತನ ವಿರುದ್ಧ ಪೊಲೀಸ್ ದೂರು ನೀಡಿರುವ ವಕೀಲ ಆರ್.ಪಿ.ಪಾಂಡೆ ಎಂಬಾತ ಕಾಂಗ್ರೆಸಿನ ಮುಖಂಡ ಎನ್ನುವುದೂ ಇದನ್ನೇ ಸೂಚಿಸುತ್ತದೆ. ಈಗ ಕಂಗೆಡುವ ಸರದಿ ಸರಕಾರದ್ದಾಗಿದೆ ಎನ್ನುವುದು ಪರಿಸ್ಥಿತಿಯ ವ್ಯಂಗ್ಯ. ಈ ಹಿಂದೆ 'ಕಾರ್ಟೂನ್ಸ್ ಅಗೈನ್‌ಸ್ಟ್ ಕರಪ್ಷನ್ ಡಾಟ್‌ಕಾಮ್' ಎಂಬ ವೆಬ್‌ಸೈಟ್‌ಅನ್ನು ಆರಂಭಿಸಿ ಅದರಲ್ಲಿ ನೂರಾರು ವ್ಯಂಗ್ಯಚಿತ್ರಗಳನ್ನು ಲೋಡ್ ಮಾಡಿದ್ದ ಅಸೀಮ್. ಆದರೆ ಮುಂಬೈ ಕ್ರೈಮ್ ಬ್ರಾಂಚ್‌ನ ಪೊಲೀಸರು ಆ ವೆಬ್‌ಸೈಟ್ ಅನ್ನು ನಿಷೇಧಿಸಿದರು. ಅಸೀಮ್ ಮುಂಬೈಯ ಮೈದಾನದಲ್ಲಿ ಈ ಕಾರ್ಟೂನ್‌ಗಳ ಪ್ರದರ್ಶನ ನಡೆಸಿದ. ಹಾಗೆಯೇ ಅಂತರ್ಜಾಲ ಸೆನ್ಸಾರ್ ವಿರುದ್ಧ ಹೋರಾಟ ನಡೆಸಲು 'ಸೇವ್ ಯುವರ್ ವಾಯ್ಸ್' ಎಂಬ ವೆಬ್‌ಸೈಟನ್ನು ಗೆಳೆಯ ಅಲೋಕ್ ದೀಕ್ಷಿತ್‌ಜತೆ ಸೇರಿ ಆರಂಭಿಸಿದ್ದಾನೆ. ಈತನ ಕಾರ್ಟೂನ್ ಬಗ್ಗೆ ಸಂಸತ್ತಿನಲ್ಲೂ ಕೆಲವು ಸಂಸದರು ಆಕ್ಷೇಪ ಎತ್ತಿದ್ದಾರೆ. ಆದರೆ ಸದ್ಯಕ್ಕಂತೂ ಅಸೀಮ್‌ನ ಅಭಿವ್ಯಕ್ತಿ ಸ್ವಾತಂತ್ರ್ಯದ ಹೋರಾಟ ಬಲ ಪಡೆದಿದೆ.

ಐಪಿಸಿ 124ರ ದೇಶದ್ರೋಹದ ವ್ಯಾಖ್ಯೆಯನ್ನು ಸರಿಯಾಗಿ ಮಾಡಬೇಕಾದ ಅಗತ್ಯವಿದೆ ಎನ್ನುವುದಕ್ಕೆ ಅಸೀಮ್ ಪ್ರಕರಣವೇ ಸಾಕ್ಷಿ. ಯಾವುದೇ ವ್ಯಕ್ತಿಯ ಕೃತ್ಯದಿಂದ ಸಾರ್ವಜನಿಕ ಅರಾಜಕತೆ ಉಂಟಾದರೆ, ಕಾನೂನ ಸುವ್ಯವಸ್ಥೆ ಹದಗೆಟ್ಟರೆ ಮಾತ್ರ ಅದನ್ನು ದೇಶದ್ರೋಹದ ವ್ಯಾಪ್ತಿಗೆ ತರಬಹುದು ಎಂಬ ಕೋರ್ಟ್ ಸೂಚನೆ ಮಹತ್ವದ ಚರ್ಚೆಗಂತೂ ಚಾಲನೆ ನೀಡಿದೆ. ಅಷ್ಟರಮಟ್ಟಿಗೆ ಅಸೀಮ್ ಹೋರಾಟಕ್ಕೆ ಜಯ ಸಿಕ್ಕಿದೆ.

# ವಿಶ್ವಸುಂದರಿಯ ದಾಂಪತ್ಯ

1999ರ ಡಿಸೆಂಬರ್‌ನಲ್ಲಿ ಲಂಡನ್ನಿನ ಒಲಿಂಪಿಯಾ ಥಿಯೇಟರ್‌ನಲ್ಲಿ 94 ಮಂದಿ ಸುಂದರಿಯರನ್ನು ಹಿಂದಿಕ್ಕಿ ಭಾರತದ ಸುಂದರಿ ಯುಕ್ತಾ ಮುಖಿ 'ವಿಶ್ವಸುಂದರಿ'ಯ ಕಿರೀಟ ಧರಿಸಿದಾಗ, ಇಲ್ಲಿನ ಮಾಧ್ಯಮಗಳಲ್ಲಿ ಅದು ಭರ್ಜರಿ ಸುದ್ದಿಯಾಗಿತ್ತು. 'ಐಶ್ವರ್ಯ ರೈ, ಸುಶ್ಮಿತಾ ಸೇನ್ ಬಳಿಕ ಇನ್ನೊಬ್ಬ ತರುಣಿ ಈ ರೀತಿ ಭಾರತದ ಕೀರ್ತಿಯನ್ನು ವಿಶ್ವಮಟ್ಟದಲ್ಲಿ ಎತ್ತಿ ಹಿಡಿದಿದ್ದಾಳೆ' ಎಂದು ಮಾಧ್ಯಮಗಳು ಹಾಡಿ ಹೊಗಳಿದವು. ಭಾರತಕ್ಕೆ ಮರಳಿದ ಬಳಿಕ ಯುಕ್ತಾ ಮುಖಿಯನ್ನು ಬಾಲಿವುಡ್ ಕೂಡಾ ಕೈಬೀಸಿ ಕರೆಯಿತು. ಪ್ಯಾಸಾ, ಲವ್ ಇನ್ ಜಪಾನ್, ಕಟ್‌ಪುತ್ಲಿ, ಮೇಮ್ ಸಾಬ್ ಮುಂತಾಗಿ ನಾಲ್ಕೈದು ಹಿಂದಿ ಹಾಗೂ 'ಪೂತಿಲ್ಲ ಉನ್‌ವಾಸಂ' ಎಂಬ ತಮಿಳು ಚಿತ್ರದಲ್ಲೂ ಈಕೆ ನಟಿಸಿದಳು. ಆದರೆ, 1.8 ಮೀಟರ್ ಎತ್ತರದ, 35-27-39 ಸುತ್ತಳತೆಯ ಈ ಸುಂದರಿ ಇನ್ನೇನು ಬಾಲಿವುಡ್‌ನಲ್ಲಿ ಎತ್ತರಕ್ಕೆ ಏರಲಿದ್ದಾಳೆ ಎಂದು ಭವಿಷ್ಯ ಹೇಳಿದವರೆಲ್ಲ ಸುಸ್ತಾಗುವಂತೆ ಈಕೆ ನಾಗಪುರದ ಉದ್ಯಮಿ ಪ್ರಿನ್ಸ್ ಟುಲಿಯನ್ನು ಮದುವೆಯಾಗಿ ಬಾಲಿವುಡ್‌ಗೆ ಟಾಟಾ ಮಾಡಿದಳು.



2008ರ ಕೊನೆಗೆ ಮದುವೆಯಾದ ಬಳಿಕ ಯುಕ್ತಾ ಮುಖಿಯ ಸುದ್ದಿಯೇ ಇರಲಿಲ್ಲ. ಈಗ ಗಂಡನ ಹಿಂಸೆಯ ವಿರುದ್ಧ ಪೊಲೀಸ್ ಠಾಣೆಗೆ ದೂರು ನೀಡಿರುವ ಯುಕ್ತಾ ಸುದ್ದಿಯಲ್ಲಿದ್ದಾಳೆ. ಮೂರು ತಿಂಗಳ ಹಿಂದೆ ಗಂಡನ ಮನೆ ಬಿಟ್ಟು ಅಂಧೇರಿಯಲ್ಲಿರುವ ಹೆತ್ತವರ ಮನೆಗೆ ಏಳರ ಎಳೆಯ ಮಗನ ಜತೆ ವಾಪಸ್ ಬಂದಿರುವ ಯುಕ್ತಾ ಮುಖಿ, ಗಂಡನ ವಿರುದ್ಧ ದೂರು ನೀಡಲು ಇಷ್ಟು ತಡ ಮಾಡಿದ್ದೇಕೆ.. ಎನ್ನುವ ಪ್ರಶ್ನೆಯೂ ಎದ್ದಿದೆ. 'ವಿಶ್ವಸುಂದರಿಯಾದರೂ ಸಂಸಾರ ಸೌಖ್ಯ ಮುಖ್ಯ' ಎನ್ನುವ ಹಿನ್ನೆಲೆಯಲ್ಲಿ ಎರಡು ಕುಟುಂಬಗಳ ಮಧ್ಯೆ ರಾಜಿ ಮಾಡಲು ನಡೆದ ಪ್ರಯತ್ನವೂ ವಿಫಲವಾಗಿದೆ ಎನ್ನುವುದು ಸುದ್ದಿ. ಜುವಾಲಜಿ ಓದಿ, ಕಂಪ್ಯೂಟರ್ ಸೈನ್ಸ್ ಡಿಪ್ಲೊಮಾ ಪಡೆದು, ಹಿಂದೂಸ್ತಾನಿ ಸಂಗೀತದ ಅಭ್ಯಾಸವನ್ನೂ ಮಾಡಿರುವ ಯುಕ್ತಾ, 34ರ ಮಧ್ಯ ವಯಸ್ಸಿನಲ್ಲಿ ನೆಮ್ಮದಿಗಾಗಿ ನಡೆಸುತ್ತಿರುವ ಹುಡುಕಾಟ ಯಶಸ್ವಿಯಾಗಬಹುದೆ?

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65